# ಚಿತ್ತ ಕೆತ್ತಿದ ಚಿತ್ರ

ವಿಜ್ಞಾನದ ವಿದ್ಯಾರ್ಥಿಯಾಗಿ ವೃತ್ತಿಕ್ಷೇತ್ರವನ್ನು ಆಯ್ಕೆ ಮಾಡಿಕೊಂಡ ಆನಂದ್ ಋಗ್ವೇದಿ ಸಾಹಿತ್ಯದ ಕೃಷಿಯನ್ನು ಇಷ್ಟಪಟ್ಟವರು. ಕನ್ನಡದಲ್ಲಿ ಹೆಚ್ಚಿನ ಅಧ್ಯಯನ ಮಾಡಿದವರು. ಕತೆ, ಕವಿತೆ, ಪ್ರಬಂಧ, ವಿಮರ್ಶೆ, ನಾಟಕ, ಸಂಶೋಧನೆಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಮೂಲತಃ ಚಿತ್ರದುರ್ಗದ ಗುಂಜಿಗನೂರಿನವರು.

ತೊಂಭತ್ತರ ದಶಕದಲ್ಲಿ ಎಂದರೆ ನನ್ನ ಹದಿಹರೆಯದ ದಿನಗಳಲ್ಲಿ ಈ ಕಾದಂಬರಿ ಓದಿದಾಗ ಪೂರ್ತಿ ಅರ್ಥವಾಗದಿದ್ದರೂ ಒಂದು ವಿಶೇಷ ಅನುಭವವಾಗಿ ದಾಖಲಾಗಿತ್ತು. ನಾನೂ ಉದ್ಯೋಗಿಯಾಗಿ ಈ ಎರಡೂವರೆ ದಶಕಗಳಲ್ಲಿ ಆಡಳಿತ ವಿಭಾಗದಲ್ಲೇ ಕೆಲಸ ಮಾಡುತ್ತಿರುವಾಗ ಗ್ರಹಿಸಿದ ಅನುಭವಿಸಿದ ಸಂಗತಿಗಳು, ಷಡ್ಯಂತ್ರಗಳಲ್ಲಿ ಸ್ವತಃ ದಾಳವಾಗಿಸಲ್ಪಟ್ಟ ಅನುಭವಗಳು, ಮನುಷ್ಯ ಮನುಷ್ಯನನ್ನೇ ಬೇಟೆಯಾಡುವ ಈ ನರವಿಂದ್ಯದಲ್ಲಿ ಶಿಕಾರಿಯ ಕೋವಿಗೆ ಕಾಡತೂಸಾಗುವ - ಬಲಿಯನ್ನು ಸೆಳೆಯಲು ಮಿಕವಾಗಿ ಬಳಸಲ್ಪಟ್ಟ- ಕೆಲವೊಮ್ಮೆ ನಾವೂ ಬಲಿ ಪಶುವಾಗುವ ಪರಿಸ್ಥಿತಿ ಸಂಭವಿಸಿದಾಗಲೆಲ್ಲಾ ನಾಗಪ್ಪನೇ ಆಗಾಗ ಮನಸ್ಸಿನೊಳಗೆ ನುಸುಳಾಡುತ್ತಿದ್ದದ್ದು. ಚಿತ್ತಾಲರ ಕಾದಂಬರಿ ಮತ್ತೆ ಮತ್ತೆ ನೆನಪಾಗುತ್ತ, ಇನ್ನಷ್ಟು ಅರ್ಥವಾಗುತ್ತ ಸಾಗಿದೆ. ನಾಗಪ್ಪ ನಮ್ಮೆಲ್ಲರ ಪ್ರತಿನಿಧಿ ಎಂದೆನಿಸಿದ್ದಿದೆ.

ಆದರೆ ಶಿಕಾರಿಯ ಕೇಂದ್ರಪಾತ್ರವಾದ ನಾಗಪ್ಪ ಕೇವಲ ಶಿಕಾರಿಯಾದವನೇ? ಅವನೊಳಗೆ ಪ್ರತಿರೋಧದ ಅಂಶ ಇರಲಿಲ್ಲವೇ!? ಪಾತ್ರದ ಅಮಾಯಕತೆಯಲ್ಲಿ ನಮ್ಮ ವಿವಶತೆಯನ್ನೂ ಕಂಡುಕೊಳ್ಳುವ ನಾವು ನಮ್ಮದೇ ಆಂತರ್ಯದ ಆಳದಲ್ಲಿ ಇದ್ದಿರಬಹುದಾದ ಕೇಡು ವಿದ್ರೋಹ ಅಪ್ರಾಮಾಣಿಕತೆಗಳನ್ನು ಗುರುತಿಸಲೂ ಹಿಂಜರಿಯುತ್ತೇವೆ! ಅಂತಹ ಹಿಂಜರಿಕೆ ನಾಗಪ್ಪನ ಪ್ರಾಮಾಣಿಕತೆಯನ್ನು ಪರೀಕ್ಷಿಸಲು ಹಿಂಜರಿದಿದೆಯೇ ಎಂದು ಪ್ರಶ್ನೆಗಳುಮ ಮೂಡುವುದಕ್ಕೂ ನಾಗಪ್ಪನ ಬದುಕು ಅವಕಾಶಗಳನ್ನು ಸೃಷ್ಟಿಸಿದೆ.

ಈ ಹೊತ್ತು ಮತ್ತೆ ಆ 'ಶಿಕಾರಿ'ಯ ನಾಗಪ್ಪನನ್ನು ನೆನಪಿಸಿಕೊಂಡಾಗ; ಆತ ವಯಸ್ಸು ಮೀರುತ್ತಿದ್ದರೂ ಮದುವೆಯಾಗದೇ ನೇಪಾಳಿ ಹುಡುಗಿಯರಾದ ರಾಣಿ, ಮೇರಿಯರೊಂದಿಗೆ ಇರಿಸಿಕೊಂಡ ಸಂಬಂಧ ನೆನಪಾಗುತ್ತದೆ! ಅಲ್ಲದೇ ಬಂದೂಕುವಾಲನ ಪಿಎ ಆದ ಮೇರಿಯ ಜೊತೆಗೆ ಈತ ತನ್ನೆಲ್ಲಾ ಆಂತರ್ಯವನ್ನು ಬೆತ್ತಲೆಗೊಳಿಸಿಕೊಳ್ಳುವುದು ಅಮಾಯಕತೆಯೇ ಎಂಬ ಪ್ರಶ್ನೆ ಮೂಡುತ್ತದೆ. ಈತನ ವಿರುದ್ಧದ ಸಂಚಿನ ಗುಂಪಿನಲ್ಲಿ ಕಚೇರಿಯ ದಸ್ತೂರ್, ಪತ್ರಕರ್ತ ಅರ್ಜುನ್ ರಾವ್ ಸೇರಿಕೊಳ್ಳುವುದು ಅಷ್ಟೇ ಅಲ್ಲದೇ ಏರ್ ಹೋಸ್ಟೆಸ್ ಥ್ರೇಟ ಇರಾನಿ ಮತ್ತು ಟೆಲಿಫೋನ್ ಆಪರೇಟರ್ ರೀನಾ ಕೂಡಾ ಸೇರುವುದು ವಿಶೇಷ ಅರ್ಥವನ್ನೇ ಕೊಡುತ್ತದೆ.

ಕವಿತೆಯೊಂದು ಪ್ರತಿ ಓದಿನಲ್ಲಿ ಹೊಸ ಅರ್ಥ ಸ್ಫುರಿಸುವಂತೆ ಈ ಕಾದಂಬರಿಯೂ ಸ್ಫುರಿಸುವುದು ವಿಶೇಷ. ನಾಗಪ್ಪನ ಚಿತ್ರವು ಪ್ರತಿ ಓದಿಗೂ ಹೊಸತಾಗಿ ಕಾಡಿದೆ. ಸಾಹಿತ್ಯಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಮನೋವೈಜ್ಞಾನಿಕವಾಗಿ ವಿಶ್ಲೇಷಿಸಬಹುದಾದ ಈ ಕಾದಂಬರಿಯಿದು. ಇದನ್ನು ಹೀಗೆ ಎಂದು ಕಂಡರಿಸುವುದು ಕಷ್ಟ ಸಾಧ್ಯ. ಯಶವಂತ ಚಿತ್ತಾಲರ ಕುರಿತ ನೆನಪುಗಳನ್ನು ದಾಖಲಿಸುವಾಗ ಬಿ.ಎಂ. ಬಶೀರರು 'ಆ ಕಡೆಯಲ್ಲಿರುವ ಮನುಷ್ಯನ ಕುರಿತಂತೆ ಇಲ್ಲಿ ಕುಳಿತು ವ್ಯರ್ಥ ಆತಂಕಪಡುವ, ಬೇಟೆಗೆ ಸಿಕ್ಕ ಜಿಂಕೆ ಮರಿಯಂತೆ ತತ್ತರಿಸುವ, ಆತ್ಮ ರಕ್ಷಣೆಗಾಗಿ ಚಿರತೆಯಂತೆ ಬೇಟೆಗೆ ಸಿದ್ಧವಾಗುವ ಹತಾಶ ಮನುಷ್ಯನ ಬಗ್ಗೆ ಚಿತ್ತಾಲರು ಬರೆದರು' ಎಂದಾಗ ಎಲ್ಲವುಗಳ ನಡುವೆ 'ಶಿಕಾರಿ'ಯ ನಾಗಪ್ಪ, 'ಪುರುಷೋತ್ತಮ'ದ ಪುರುಷೋತ್ತಮ, 'ಸಿದ್ಧಾರ್ಥ'ದ ಸಿದ್ಧಾರ್ಥ... ಎಲ್ಲರೂ ಹೆಚ್ಚೆಚ್ಚು ಅರ್ಥವಾಗತೊಡಗುತ್ತಾರೆ.

ಅನನ್ಯ ವಿಶ್ಲೇಷಣೆಗಳಿಗೆ ಸದಾ ಸ್ಫೂರ್ತವಾಗುವ ಚಿತ್ತಾಲರ ಕಾದಂಬರಿಗಳ ಬಗ್ಗೆ ಮಾತಾಡುವುದು ಇಷ್ಟ. ಆದರೆ ಅವರ 'ಶಿಕಾರಿ' ಕಾದಂಬರಿಯ ಬಗ್ಗೆ ತುಸು ಕಷ್ಟ!

●